ಚಿತ್ರದುರ್ಗದವರಾದ ಮೋದೂರು ತೇಜ ಕಥನ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಿದವರು. 'ಮರದೊಳಗಣ ಕಿಚ್ಚು', 'ಅರ್ಧಕ್ಕೆ ನಿಂತ ಚಿತ್ರ', 'ಹುಲಿವೇಷ' ಅವರು ಬರೆದ ಕಥಾ ಸಂಕಲನಗಳು. 'ವೇದಾವತಿ ತೀರದಲ್ಲಿ', 'ತುದಿಯಿರದ ಹಾದಿ' ಅವರ ಕಾದಂಬರಿಗಳು. ಕವನಸಂಕಲನ ಮತ್ತು ನಾಟಕಗಳನ್ನೂ ಪ್ರಕಟಿಸಿದ್ದಾರೆ. ಪ್ರಸ್ತುತ ಬಡವನಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕನ್ನಡ ಭಾಷಾ ಶಿಕ್ಷಕರು.

ಕೆಲವರು ಹುಲ್ಲಿನ ಬಣಿವೆಗೆ ಹೊದಿಸಿದ್ದ ತಾಡಪಾಲ್ ಗಾಳಿಗೆ ಹಾರಿಹೋಗಿ ಇನ್ನೆಲ್ಲೋ ಬಿದ್ದಿದ್ದನ್ನ ಬ್ಯಾಟರಿ ಬೆಳಕಿನಲ್ಲಿ ಹುಡುಕಿಕೊಂಡು ಓಡಾಡುತ್ತಿದ್ದರು. ಇಂಥ ಮಳೆ ನಮ್ಮ ಜೀವಮಾನದಲ್ಲೇ ನೋಡಿರಲಿಲ್ಲ ಎಂದುಕೊಂಡು ಅಕ್ಕಪಕ್ಕದ ಮನೆಯವರು, ಕೆರೆಗಳಿಗೆ ನೀರು ಬಂದಿದ್ದು, ನಡುಗಡ್ಡೆ ಸೋಕಿಕೊಂಡು ಹರಿವ ಹಳ್ಳಗಳ ಬಗ್ಗೆ, ಮಳೆ ಸೃಷ್ಟಿಸಿದ ಅವಾಂತರದ ಬಗ್ಗೆ ಮಾತಾಡಿಕೊಳ್ಳುತ್ತಿದ್ದರು. ಆ ಮಾತಿನ ಗದ್ದಲಕ್ಕೆ ಹೊರಗೆ ಬಂದ ಪಕ್ಕದ ಮನೆ ತಿಪ್ಪೇಶಪ್ಪ, "ಏನ್ ಮಂಜಣ್ಣ ಊಟ ಆಯ್ತು" ಎಂದು ಕೇಳಿದ.

"ಇನ್ನು ಇಲ್ಲಣ್ಣ, ಮಳೆ ವರಪು ಕೊಟ್ಟಮೇಲೆ ಉಂಬನಾಂತ ಸುಮ್ನಿದ್ವಿ" ಅಂತ ನಿರುತ್ಸಾಹದಿಂದ ಹೇಳಿದ ಮಂಜಣ್ಣನ ಮಾತಿಗೆ ಒಳಗೊಳಗೆ ಖುಷಿ ಪಟ್ಟಿದ್ದ ತಿಪ್ಪೇಶಪ್ಪ. ಮೂರುದಿನದ ಹಿಂಡು ಕೂಳಿಗೆ ಮಾಡಿದ ನಾಟಿಕೋಳಿಸಾರಿನಲ್ಲಿ ಉಣ್ಣಬೇಕೆಂಬ ಆಸೆಯಿಂದ ಅರ್ಧಕ್ವಾಟ್ರು ಕುಡಿದು ಸಂಜೆಯಿಂದ ಕಾದುಕೊಂಡಿದ್ದವನಿಗೆ ಮಳೆ ನಿಶೆ ಇಳಿಯುವಂತೆ ಮಾಡಿತ್ತು.

"ನಿಮ್ಮಪ್ಪ ಪುಣ್ಯಾತ್ಮ ಕಣೊ ಮಂಜಣ್ಣ, ಇಡೀ ಊರಿಗೆ ಮಳೆ ತರಿಸಿಬಿಟ್ಟ. ಸಾಯೊ ವಯಸಲ್ಲ ಅಂತ ನಾವು ಅಂದುಕೊಳ್ತೀವಿ, ಆದ್ರೆ ಈಗಿನ ಕಾಯಿಲೆಗಳ ಗುಣಾನೇ ಗೊತ್ತಾಗಲ್ಲ. ಮೊಮ್ಮಕ್ಕಳ ಮದುವೆ ಮಾಡಿ ಸಾಯ್ತೀನಿ ಕಣೊ ತಿಪ್ಪೇಶ ಅಂತ ನನ್ನ ಹತ್ರ ಹೇಳ್ತಿದ್ದ. ಆದ್ರೆ ಈ ದೇವರಂಬೋನು ಒಳ್ಳೆ ಮರಕ್ಕೆ ಬೇಗ ಕೊಡ್ಲಿ ಹಾಕೋದು" ಅಂತ ಮಂಜಣ್ಣನ ತಂದೆ ಗಿಡ್ಡಹನುಮಪ್ಪನ್ನ ಕೊಂಡಾಡಿದ್ದು ತಿಪ್ಪೇಶಪ್ಪನ ಅರ್ಧಂಬರ್ಧ ನಿಶೆಯ ಮಾತುಗಳೆಂದು ನಿರಾಕರಿಸುವಂತಿರಲಿಲ್ಲ. ತನ್ನ ತಂದೆಯನ್ನ ಹೊಗಳಿದ್ದು ಮಂಜಣ್ಣನಿಗೆ ಖುಷಿಯೆನಿಸಿದರೂ ತಿಪ್ಪೇಶಪ್ಪ ಏನೋ ಮರೆಮಾಚುತ್ತಿದ್ದಾನೆ ಅನಿಸಿತ್ತು. ಅಷ್ಟೊತ್ತಿಗೆ ಎದುರುಮನೆ ಕೋಳಿರಂಗಜ್ಜ "ಏನ್ ಮಂಜಣ್ಣ ನಾಳೆ ನಿನ್ನ ಕೆಲಸಕ್ಕೆ ಈ ಮಳೆ ಅಡ್ಡಿ ಮಾಡಿತು" ಅಂತೇಳಿ ಅವರ ಜೊತೆ ಸೇರಿಕೊಂಡ. ಇವರಿಬ್ಬರೂ ನಾಟಿಕೋಳಿ ಸಾರಿಗೆ ಕಾದುಕೊಂಡಿದಾರೆ ಅನ್ನೋದು ಮಂಜಣ್ಣನಿಗೆ ಮನದಟ್ಟಾಯಿತು.

"ಬರ್ಲಿ ಬಿಡಣ್ಣ, ಮಳೆಬೆಳೆ ಚೆನ್ನಾಗಾದ್ರೆ ಇವತ್ತಲ್ಲ ನಾಳೆ ದುಡುಕೊಳ್ತೀನಿ. ಶೇಂಗಾಗಿಡ ಊಡಿಳಿಯೊ ಹೊತ್ತಲ್ಲಿ ಒಂದು ಮಳೆ ಬೇಕಾಗಿತ್ತು. ಒಕ್ಕಲು ಮಕ್ಕಳಿಗೆ ಕೊಟ್ಟ ಮಾತಿನಂತೆ ಉತ್ತರೆ ಮಳೆ ಒಳ್ಳೇ ಟೈಮಿಗೆ ಬಂದೈತೆ" ಅಂತ ಹೇಳುವಾಗ ಮಂಜಣ್ಣನ ಮಾತಿನಲ್ಲಿ ರೈತರಿಗೆ ಕೃತಜ್ಞತೆ ಸಲ್ಲಿಸುವಂತಿತ್ತು.

ಮಂಜಣ್ಣನ ಕಸುಬೇ ರೈತರನ್ನು ಅವಲಂಬಿಸಿತ್ತು. ದನಕರುಗಳೇ ಕಮ್ಮಿಯಾಗುತ್ತಿರುವ ಕಾಲದಲ್ಲಿ ಎತ್ತಿನ ಕಾಲಿಗೆ ಲಾಲ್ ಕಟ್ಟುವ ಕೆಲಸ ಮಾಡುವ ಮಂಜಣ್ಣನಿಗೆ ರೈತರೇ ಜೀವಾಳ. ಮೊದಲಾಗಿದ್ದರೆ, ಒಂದೂರಿಗೆ ಹೋದ್ರೆ ಸಾಕು, ಎಷ್ಟೊಂದು ಎತ್ತುಗಳನ್ನು ಹಿಡಿದುಕೊಂಡು ಬರೋರು. ಊರಿನ ನಡಂತ್ರಾನೊ ಇಲ್ಲಾಂದ್ರೆ ಬಸ್‌ಸ್ಟಾಂಡಿನಲ್ಲಿರೊ ಮರದ ನೆರಳಿಗೆ ಹೋದನೆಂದರೆ ಸರದಿ ಸಾಲಿನಲ್ಲಿ ಎತ್ತುಗಳನ್ನು ನಿಲ್ಲಿಸುತ್ತಿದ್ದರು. ಎತ್ತಿನ ಕಾಲಿಗೆ ನೋವಾಗದಂತೆ, ಗಾಯವಾಗದಂತೆ ಲಾಲ್ ಕಟ್ಟುವ ಮಂಜಣ್ಣನ ಕೆಲಸ ರೈತರಿಗೆ ಇಷ್ಟವಾಗಿದ್ದರಿಂದ ಎರಡು ದಿನ ತಡವಾದರೂ ಆತನಿಗಾಗಿ ಕಾಯುತ್ತಿದ್ದರು. ಈಗೀಗ ಎತ್ತುಗಳೇ ಕಮ್ಮಿಯಾಗಿದ್ದವು. ಆದರೂ ತನ್ನ ಆದಾಯಕ್ಕೇನೂ ಕೊರತೆ ಆಗಿರಲಿಲ್ಲ. 'ಈ ಲಾಲ್ ಕಟ್ಟುವ ಕಸುಬು ನೀನ್ಯಾವಾಗ ಕಲ್ತಲೆ ಮಂಜ?' ಅಂತ ಅನೇಕ ಕಡೆ ಪರಿಚಯಸ್ಥರು ಕೇಳುತ್ತಿದ್ದರು. ಮಂಜಣ್ಣ ಅವರಿಗೆಲ್ಲ ಮುಗುಳುನಗೆಯ ಉತ್ತರ ನೀಡಿ ಸುಮ್ಮನಾಗುತ್ತಿದ್ದ. ಅದು ಅವರ ತಾತನಿಂದ ಬಳುವಳಿಯಾಗಿ ಬಂದಿತ್ತು.

ಅವರ ತಾತ ಮುನಿಯಜ್ಜ ಸ್ವಾಭಿಮಾನಿ. ಒಂದು ದಿನ ಊರಾಗಳೋರು ತ್ವಾಟದ ಕೆಲಸಕ್ಕೆ ತಡವಾಗಿ ಹೋಗಿದ್ದಕ್ಕೆ ತ್ವಾಟದ ಯಜಮಾನ ಇತರೆ ಕೂಲೇರು ಎದುರಿಗೆ